ವಸುಂಧರಾ ಕದಲೂರು ಹೆಸರಿನಲ್ಲಿ ಓದುಗರಿಗೆ ಪರಿಚಿತರಾದ ವಸುಂಧರಾ ಕೆ.ಎಂ. ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಕದಲೂರು ಗ್ರಾಮದವರು. ಕೃಷಿ ಮಾರಾಟ ಇಲಾಖೆಯಲ್ಲಿ ಉಪನಿರ್ದೇಶಕಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಅವರು, ಕಥೆ–ಕವಿತೆ–ಪ್ರಬಂಧಗಳ ಕೃಷಿಯಲ್ಲೂ ನಿರತರು. ಆಡಳಿತದಲ್ಲಿ ಕನ್ನಡವನ್ನು ಸಮರ್ಥವಾಗಿ ಅನುಷ್ಠಾನಗೊಳಿಸುತ್ತಿರುವ ಸಮರ್ಥ ಅಧಿಕಾರಿಗಳಲ್ಲೊಬ್ಬರು. 'ಮರೆತು ಬಿಟ್ಟದ್ದು' ಪ್ರಕಟಿತ ಕವನ ಸಂಕಲನ.

ಅಧಿಕಾರ ಇದೆ?' ಎಂದು ಕೇಳುತ್ತಿರುತ್ತೇವೆ. ಇದನ್ನೆಲ್ಲ ಗಮನಿಸಿದರೆ, ಅಧಿಕಾರ ಎನ್ನುವುದು ಪದವಾಗಿ ಹಾಗೂ ಸಾಧ್ಯತೆಯಾಗಿ ಎಷ್ಟು ವಿಸ್ತೃತ ಅರ್ಥದಲ್ಲಿ ಬಳಕೆಯಲ್ಲಿದೆ ಎನ್ನುವುದು ಅರ್ಥವಾಗುತ್ತದೆ.

ಅಧಿಕಾರಕ್ಕೆ ಒಂದು ನಿರೂಪಣಾ ಕ್ರಮವಿರುತ್ತದೆ, ನಿಯಂತ್ರಣ ರೂಪವಿರುತ್ತದೆ, ಪ್ರಭಾವಿಸುವ ಶಕ್ತಿ ಇರುತ್ತದೆ. 'ಒಡೆತನ ಅಥವಾ ಪ್ರಭುತ್ವ' ಎನ್ನುವ ಅರ್ಥಗಳನ್ನು 'ಅಧಿಕಾರ' ಪದವು ಸ್ಫುರಿಸುತ್ತದೆ. ಇಂಗ್ಲಿಷ್‌ನ 'ಸ್ಟೇಟ್' ಎನ್ನುವ ಪದಕ್ಕೆ ಸಂವಾದಿಯಾಗಿ ನಾವು 'ಪ್ರಭುತ್ವ' ಎನ್ನುವ ಪದವನ್ನು ಬಳಕೆ ಮಾಡುತ್ತೇವೆ. ಸ್ಟೇಟ್ ಎಂದರೆ ರಾಜ್ಯ ಎನ್ನುವ ಪರಿಕಲ್ಪನೆಯೂ ಇದೆ. ಹಾಗೆಯೇ ಒಡೆತನ, ಪ್ರಭುತ್ವದ ಪರಿಕಲ್ಪನೆಯಿಂದಲೂ ಸ್ಟೇಟ್‌ನ ಹೆಸರಿನಲ್ಲಿ ಆದೇಶಗಳನ್ನೂ ಹೊರಡಿಸಲಾಗುತ್ತದೆ. ಪ್ರಜಾಪ್ರಭುತ್ವಕ್ಕೂ ಪೂರ್ವದಲ್ಲಿ ರಾಜವಂಶದವರ ಆಳ್ವಿಕೆಗಳಲ್ಲಿ ವ್ಯಕ್ತಿ ಕೇಂದ್ರಿತ ನೆಲೆಗಳಲ್ಲಿ ಅಧಿಕಾರ ಸ್ಥಾಪಿತವಾಗಿದ್ದುದನ್ನು ಕಾಣಬಹುದಿತ್ತು. ಅಲ್ಲಿ ಅರಸ, ಮಂತ್ರಿ, ಕೋಶಾಧ್ಯಕ್ಷ, ಸೇನಾಧಿಪತಿ, ಮಾಂಡಳೀಕ, ಸಾಮಂತ – ಹೀಗೆ ನಾನಾ ಸ್ತರಗಳಲ್ಲಿ ಅಧಿಕಾರ ಚಲಾವಣೆಯಾಗುತ್ತಿತ್ತು. ಪ್ರಸ್ತುತ ರಾಷ್ಟ್ರಾಧ್ಯಕ್ಷ , ಪ್ರಧಾನಮಂತ್ರಿ, ರಾಜ್ಯಪಾಲ, ಮುಖ್ಯಮಂತ್ರಿ ಎನ್ನುವ ವಿವಿಧ ಹಂತಗಳಲ್ಲಿ ಅಧಿಕಾರದ ವ್ಯಾಪ್ತಿಯನ್ನು ಗುರುತಿಸಬಹುದಾಗಿದೆ.

ಅಧಿಕಾರದ ವಿವಿಧ ನೆಲೆಗಳಲ್ಲಿ ಕೋರ್ಟು, ಕಚೇರಿಗಳು, ಸೇನೆ, ಪೊಲೀಸ್, ಅಧಿಕಾರಶಾಹಿ ವ್ಯವಸ್ಥೆಗಳು ಸೇರುತ್ತವೆ. ಈ ವ್ಯವಸ್ಥೆಗಳು ಶಕ್ತಿಕೇಂದ್ರಿತವಾಗಿರುತ್ತವೆ ಹಾಗೂ ಆದೇಶ ಹೊರಡಿಸುವ, ನಿಯಂತ್ರಿಸುವ, ನಿರೂಪಿಸುವ, ಪ್ರಭಾವಿಸುವ ಕಾರ್ಯಗಳನ್ನು ನಿರ್ವಹಿಸುತ್ತಿರುತ್ತವೆ. ಜನಸಮುದಾಯದ ಜೊತೆಗೆ ಪರಿಸರ ಸಂಪತ್ತಿನ ಮೇಲೂ ನಿಯಂತ್ರಣ ಸ್ಥಾಪಿಸುತ್ತವೆ. ಡಿ.ಆರ್. ನಾಗರಾಜ ಅವರು, 'ಪ್ರಭುತ್ವ ದೇವರಷ್ಟು ದೊಡ್ಡದು ಹಾಗೂ ಶಕ್ತಿಶಾಲಿಯಾದುದು. ಈ ದೊಡ್ಡಶಕ್ತಿ ಎನ್ನುವುದು ಜನಾಂಗ, ಪ್ರಭುತ್ವ, ಚರಿತ್ರೆ, ಹೀಗೆ ಬೇರೆ ಬೇರೆ ರೂಪಗಳನ್ನು ಪಡೆಯುತ್ತಾ ಹೋಗುತ್ತದೆ' ಎಂದು ವ್ಯಾಖ್ಯಾನಿಸುತ್ತಾರೆ. ಇಂತಹ ಪ್ರಭುತ್ವದ ಆಳ್ವಿಕೆಗೆ ಒದಗಿ ಬರುವ ಶಕ್ತಿಯೇ ಅಧಿಕಾರ. ಹಾಗಾದರೆ, ಹೀಗೆ ಒದಗಿ ಬಂದ ಅಧಿಕಾರವನ್ನು ಪ್ರಭಾವಪೂರ್ಣವಾಗಿ ಚಲಾಯಿಸುವುದು ಹೇಗೆ? ಅದಕ್ಕೆಂದೇ ಕಾನೂನು, ಶಾಸನ, ನೀತಿ–ನಿಯಮಗಳನ್ನು ರೂಪಿಸಿಕೊಳ್ಳಲಾಯಿತು. ಇದಕ್ಕೆ ಪೂರಕವಾಗಿ ಭಾಷೆಯನ್ನು ದುಡಿಸಿಕೊಳ್ಳಲಾಯಿತು. ಭಾಷೆ ಬೆಳೆದಂತೆ ಅಧಿಕಾರದ ಆಯಾಮಗಳು ವಿಸ್ತಾರವಾಗುತ್ತಾ ಹೋದವು.

ಮಾನವ ಜನಾಂಗದ ಬೆಳವಣಿಗೆಯನ್ನು ಮೂಲದಲ್ಲಿ ರೂಪುಗೊಂಡ ಬುಡಕಟ್ಟುಗಳು, ಜನಪದ ಸಮುದಾಯಗಳು, ಅನಂತರದಲ್ಲಿ ಬೃಹತ್ ಪ್ರಮಾಣದಲ್ಲಿ ಬೆಳೆದು ಬಂದ ರಾಜಪ್ರಭುತ್ವಗಳ ಮೂಲಕ ಗುರುತಿಸಬಹುದು. ಈ ಇತಿಹಾಸವನ್ನು ಅವಲೋಕಿಸಿದಾಗ ಭಾಷೆ ಹಾಗೂ ಅಧಿಕಾರದ ನಂಟಿನ ಅರಿವಾಗುತ್ತದೆ. ಅಧಿಕಾರದ ಸ್ವರೂಪ ಭಾಷಾರಚನೆಯನ್ನು ಪ್ರಭಾವಿಸಿರುವುದು ಹಾಗೂ ಭಾಷೆಗಳು ಅಧಿಕಾರದ ಗತ್ತಿಗೆ ಅಥವಾ ಅಗತ್ಯಕ್ಕೆ ತಕ್ಕಂತೆ ಬೆಳವಣಿಗೆಯಾಗಿರುವ ಪರಸ್ಪರ ಪೂರಕ ಅಂಶಗಳ ಬಗ್ಗೆ ತಿಳಿಯಬಹುದು. ಭಾಷೆ ಹಾಗೂ ಅಧಿಕಾರ ಪರಸ್ಪರ ಪೂರಕವಾಗಿದ್ದರೂ, ಅಧಿಕಾರ ಚಲಾವಣೆಯ ವಿಷಯಕ್ಕೆ ಬಂದಾಗ ಭಾಷೆಗೆ ವಿಶೇಷ ಶಕ್ತಿಯಿರುವುದು ವೇದ್ಯವಾಗುತ್ತದೆ. ಭಾಷೆಯ ಮೂಲಕ ಅಧಿಕಾರವನ್ನು ವ್ಯಾಖ್ಯಾನಿಸಿದಾಗ ಅದು ಅಧಿಕಾರದ ಶಕ್ತಿಯನ್ನು ವರ್ಣಿಸುತ್ತದೆ, ಅಧಿಕಾರವನ್ನು